ಶ್ರೀ ಎಂ. ಡಿ. ಲಕ್ಷ್ಮೀನಾರಾಯಣ : ನನ್ನ ಕ್ಷೇತ್ರದಲ್ಲಿ 1997 ರಲ್ಲಿ ಎಸ್‌ಸಿ : ಎಸ್‌ಟಿ ನಿಗಮದವರು ಕೊರೆದಿರುವಂಥ ಬೋರ್‌ಗಳಿಗೆ ಇದುವರೆವಿಗೂ ಕರೆಂಟ್ ಕೊಟ್ಟಿಲ್ಲ..

ಅಧ್ಯಕ್ಷರು : ಈಗಾಗಲೇ ನಾನು ಹೇಳಿದೆ, ಅವರವರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪ್ರಶ್ನೆ ಕೇಳಿದರೆ ಬಹಳ ಸಮಯ ಬೇಕಾಗುತ್ತದೆ, ಆದ್ದರಿಂದ ಜನರಲ್ಲಾಗಿ ಕೇಳಿ ಎಂದು ಹೇಳಿದ್ದೇನೆ. ಪ್ರಶ್ನೋತ್ತರದಲ್ಲಿ ಈ ರೀತಿ ಆದರೆ ಆಗುವುದಿಲ್ಲ, ಬೇಕಾದರೆ ಇದರ ಬಗ್ಗೆ ಅರ್ಧ ಗಂಟೆಗಳ ಕಾಲ ಚರ್ಚೆಗೆ ತೆಗೆದುಕೊಳ್ಳೋಣ

ಶ್ರೀ ಕಾಗೋಡು ತಿಮ್ಮಪ್ಪ : ನಾನು ಎಲ್ಲಾ ಶಾಸಕರುಗಳಿಗೆ ಪತ್ರ ಬರೆಯುತ್ತಿದ್ದೇನೆ; ಅವರವರ ಕ್ಷೇತ್ರ ಅಥವಾ ಅವರವರ ತಾಲ್ಲೂಕುಗಳಲ್ಲಿ ಈ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಅದು ವೈಯಕ್ತಿಕ ಯೋಜನೆ ಇರಬಹುದು ಅಥವಾ ಗುಂಪು ಯೋಜನೆಯಿರಬಹುದು, ಒಟ್ಟಾರೆಯಾಗಿ ಮಾಡಿರುವಂಥವುಗಳನ್ನು ನೀವಾಗಲಿ ಅಥವಾ ನಿಮ್ಮ ಜೊತೆಗೆ ತಾಲ್ಲೂಕು ಪಂಚಾಯತಿಯ ಸಿ. ಇ. ಓ. ರವರನ್ನು ಕರೆದುಕೊಂಡು ಹೋಗಿ ಸ್ಥಳ ಪರಿಶೀಲಿಸಿ, ಅವುಗಳು ಯಾವ ರೀತಿ ನಡೆಯುತ್ತಿವೆ? ಆ ಫಲಾನುಭವಿಗಳು ಯಾವ ರೀತಿ ಉಪಯೋಗ ಮಾಡುತ್ತಿದ್ದಾರೆ? ಸರ್ಕಾರದಿಂದ ಇನ್ನೂ ಬೇರೆ ಏನಾದರೂ ಸಹಾಯ ಬೇಕೆ? ಎಂಬುದನ್ನು ಗುರುತಿಸಿ ಅದರ ಬಗ್ಗೆ ನನಗೆ ಪತ್ರ ಬರೆಯಬೇಕು ಎಂದು ತಿಳಿಸಬೇಕೆಂದಿದ್ದೇನೆ ನಾನು ಈಗಾಗಲೇ ಡ್ರಾಫ್ಟ್ ರೆಡಿ ಮಾಡಿದ್ದೇನೆ. ಇದರಲ್ಲಿ ಸಂಪೂರ್ಣವಾದ ಜವಾಬ್ದಾರಿ ನಿಮಗೆ ವಹಿಸಿದ್ದೇನೆ. ಒಂದು ಪಕ್ಷ ತಾವು ನೇರವಾಗಿ ಹೋಗಲಿಕ್ಕೆ ಆಗದೇ ಹೋದರೆ ತಮ್ಮ ಮುಖಾಂತರ ಅಧಿಕಾರಿಗಳನ್ನು ಕಳುಹಿಸಿ ವರದಿ ಪಡೆದುಕೊಂಡು ನನಗೆ ಪತ್ರ ಬರೆಯಬಹುದು. ಈ ರೀತಿ ಕಳುಹಿಸುವಾಗ ನಾನೇ ಖುದ್ದಾಗಿ ಅಲ್ಲಿರುವ ಎಲ್ಲಾ ಲೋಪದೋಷಗಳನ್ನು ಸರಿಪಡಿಸುತ್ತೇನೆ.

ಅಧ್ಯಕ್ಷರು : ತಾವು ಎಲ್ಲಾ ಜಿಲ್ಲೆಗಳಿಂದ ಮಾಹಿತಿ ತರಿಸಿ; ಏಕೆಂದರೆ, ಪ್ರತಿಯೊಬ್ಬರೂ ಅವರವರ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಕೇಳುತ್ತಿರುವುದರಿಂದ ಅರ್ಧಗಂಟೆಗಳ ಕಾಲ ಈ ವಿಷಯದಲ್ಲಿ ಚರ್ಚೆಗೆ ನಾನು ಅವಕಾಶ ಮಾಡಿ ಕೊಡುತ್ತೇನೆ.

ಶಿವಮೊಗ್ಗ - ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಖಾಸಗಿಯವರು ಲೇಔಟ್ ಮಾಡಿರುವ ಬಗ್ಗೆ.

258 (2451) : ಶ್ರೀ ಹೆಚ್. ಎಂ. ಚಂದ್ರಶೇಖರಪ್ಪ (ಶಿವಮೊಗ್ಗ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಶಿವಮೊಗ್ಗ - ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಖಾಸಗಿಯವರು ಯಾರು ಯಾರು ಎಷ್ಟು ಎಕರೆ ಲೇಔಟ್ ಮಾಡಿರುತ್ತಾರೆ;

(ಆ) ಶಿವಮೊಗ್ಗ ನಗರಸಭೆ ಪ್ರತಿ ತಿಂಗಳಿಗೆ ಸಂದಾಯವಾಗುವ ಆದಾಯ ಎಷ್ಟು?

(ಇ) ಶಿವಮೊಗ್ಗ ನಗರಸಭೆಯಲ್ಲಿ ಇರುವ ನೌಕರರ ಸಂಖ್ಯೆ ಎಷ್ಟು?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ರಾಜ್ಯ ಪೌರಾಡಳಿತ ಸಚಿವರು) :

(ಅ) 1988 ರಿಂದ 2000ದ ಮಾರ್ಚ್ ಅಂತ್ಯದವರೆಗೆ ಒಟ್ಟು 94 ವಿನ್ಯಾಸಗಳನ್ನು ಅನುಮೋದಿಸಿದೆ. ಒಟ್ಟು ವಿಸ್ತೀರ್ಣ 529 ಎಕರೆ 22 $^{1}/_{4}$ ಗುಂಟೆ.

(ವಿವರಣೆಯನ್ನು ಅನುಬಂಧದಲ್ಲಿ ನೀಡಲಾಗಿದೆ)

(ಆ) ಶಿವಮೊಗ್ಗ ನಗರಸಭೆಯ ಕಳೆದ ಆರ್ಥಿಕ ವರ್ಷದ ವಾರ್ಷಿಕ ಆದಾಯ ರೂ. 242-00 ಲಕ್ಷಗಳಿದ್ದು, ಪ್ರತಿ ಮಾಹೆ ಸರಾಸರಿ ರೂ. 61.88 ಲಕ್ಷಗಳು ಸಂದಾಯವಾಗುತ್ತದೆ.

(ಇ) ಒಟ್ಟು 802

ಕ್ರ. ಸಂ.	ಹೆಸರು	ಗ್ರಾಮ	ಸರ್ವೆ ನಂ	ವಿಸ್ತೀರ್ಣ
1	2	3	4	5
1.	ಟಿ. ಎನ್. ಪ್ರಕಾಶ್	ಗೋಪಾಳ	20	02-12 $^{1}/_{2}$
2.	ಅಧ್ಯಕ್ಷರು ಗ್ರಾಮಾಂತರ ಸರ್ಕಾರಿ ನೌಕರರ ವಸತಿ ಸಹಕಾರಿ ಸಂ.	ಗೋಪಾಳ	20 20:2	01-37 $^{1}/_{2}$
3.	ಅಧ್ಯಕ್ಷರು ಅಹರೀಂ ಕೋ ಅಪರೇಟಿವ್ ಸೊಸೈಟಿ ಗೋಪಾಳ	ಗೋಪಾಳ	55:2, 55:3 56:2,56:3, 57	33-00
4.	ಅಧ್ಯಕ್ಷರು, ಸರ್ಕಾರಿ ಗ್ರಾಮಾಂತರ ನೌಕರರ ಸಹಕಾರ ಸಂ.	ಗೋಪಾಳ	67:2	02-20
5.	ಡಿ. ಹೆಚ್. ಶಂಕರಮೂರ್ತಿ	ಗೋಪಾಳ	33:2	02-24
6.	ಮಂಜುನಾಥ ಮತ್ತು ಇತರರು	ಗೋಪಾಳ	21:2, 21:3	02-19 $^{1}/_{4}$
7.	ಅಧ್ಯಕ್ಷರು, ಗ್ರಾಮಾಂತರ ಸಹಕಾರ ಸರ್ಕಾರಿ ನೌಕರರ ಸಂಘ (ರಿ)	ಗೋಪಾಳ	21:2, 21:3	01-37 $^{3}/_{4}$
8.	ಬಿ. ಎನ್. ವಿಶ್ವೇಂದ್ರ ಮತ್ತು ಇತರರು	ಗೋಪಾಳ	67:1	03-08

1	2	3	4	5
9.	ನಾಗಪ್ಪ ಪಟೇಲ್ ಮತ್ತು ಇತರರು	ಗಾಡಿಕೊಪ್ಪ	2,36,37,38	22-20
10.	ಮಹದೇವಪ್ಪ ಮತ್ತು ಬಸಪ್ಪ	ಗಾಡಿಕೊಪ್ಪ	34ರ ಪೈಕಿ	07-22
11.	ಕೃಷ್ಣ ಬಿನ್ ಬಿ. ಕೆ. ರಾವ್	ಗಾಡಿಕೊಪ್ಪ	31	05-17
12.	ಲಕ್ಷ್ಮಿದೇವಮ್ಮ	ಊರಗದೂರು	35,36,37	09-12
13.	ಆರ್. ಬಾಬು	ಅಲ್‌ಕೋಳ	55	07-20
14.	ಚಂದ್ರಕಾಂತ	ಅಲ್‌ಕೊಳ	51:2	3-3-30
15.	ಹಾಲಪ್ಪ	ಅಲ್‌ಕೊಳ	52	02-20
16.	ಎಂ. ಕೆ. ಪ್ರಶಾಂತ ಮತ್ತು ಮುರುಗೇಶ್	ಅಲ್‌ಕೊಳ	53:2ಎ	04-20
17.	ಬಿ. ಟಿ. ಶ್ರೀನಿವಾಸ ಮತ್ತು ಇತರರು	ಮುಳ್ಳಕೆರೆ	42,44	09-21
18.	ಅಬ್ದುಲ್ ಗಫಾರ್	ಮುಳ್ಳಕೆರೆ	45:1	04-00
19.	ಯು. ಎ.ಎನ್ ಆಂಡ್ ಎಡಿಡಿ ನೌಕರರ ಸಹಕಾರ ಸಂಘ	ನವಿಲ್	147 ರಿಂದ 152 153:23,159:2ಎ 55,162,163	14-08
20.	ಕಾರ್ಯದರ್ಶಿ, ಎನ್‌ಇಎಸ್, ಇಹೆಚ್‌ಸಿಎಸ್ ಲಿಮಿಟೆಡ್	ನವಿಲ್	97:2, 97:3	04-31 1/2
21.	-- " --	ನವಿಲ್	98:3	02-11
22.	-- " --	ನವಿಲ್	102	10-05
23.	-- " --	ನವಿಲ್	104:1	10-05
24.	ಎಂ. ಮುನಿರತ್ನಂ	ನವಿಲ್	157:2	02-14
25.	ಮಲ್ಲಮ್ಮ ಕೋಂ ಹನುಮಂತಪ್ಪ	ನವಿಲ್	44:1ಎ	04-00
26.	ಸಿ. ಎನ್. ಟ್ರಸ್ಟ್	ಮಿಷನ್ ಕಾಂಪೌಂಡ್	ಮು.ಖಾ.ನಂ. 1753-1731 1943	00-39 1/2

1	2	3	4	5
27.	ಕರಿಯಪ್ಪ	ಕಲ್ಲಹಳ್ಳಿ	156	01-25
28.	ಜಿ. ರಂಗಪ್ಪ	ಕಲ್ಲಹಳ್ಳಿ	59:1	01-36
29.	ಬಿ. ತಿಮ್ಮಯ್ಯ	ಕಲ್ಲಹಳ್ಳಿ	108ರ ಭಾಗ	01-06
30.	ಎಲ್. ಸತ್ಯನಾರಾಯಣ ಮತ್ತು ಇತರರು	ಬೊಮ್ಮನಹಳ್ಳಿ	142,143,145, 147	06-00
31.	ಆರ್. ತಿಮ್ಮಯ್ಯ ಬಿನ್ ರಂಗಣ್ಣ	ಮಂಡ್ಲಿ	234:1,235:1	02-03
32.	ಸಿ. ಎನ್. ರಾಜಣ್ಣ	ಬೊಮ್ಮನಕಟ್ಟೆ	6	04-00
33.	ಜಿ. ರಾಘವೇಂದ್ರ	ಬೊಮ್ಮನಕಟ್ಟೆ	152	-
34.	ಮಂಜುನಾಥ್ ಬಂಡಾರಿ	ನವಿಲೇ	95:2	02-32
35.	ಎಂ. ವಿ. ನಾಗರತ್ನಮ್ಮ	ತೆವರಚಟ್ನಹಳ್ಳಿ	75,179	07-26
36.	ಎ.ಎಸ್. ರಾಮಕೃಷ್ಣರಾವ್	ಆನುನಕಟ್ಟೆ	80	02-13
37.	ಎಲ್. ಭುವನೇಶ್ವರಿ	ಗಾಡಿಕೊಪ್ಪ	22:2ಬಿ	02-00
38.	ಡಿ. ಹೆಚ್. ಶಂಕರಮೂರ್ತಿ	ಸೋಮನಕೊಪ್ಪ	74:2,3	04-22
39.	ಯುಎಎಸ್ ಮತ್ತು ಎಡಿಡಿ ಇಹೆಚ್‌ಬಿಸಿಎಸ್	ಮಲ್ಲಿಗೇನಹಳ್ಳಿ	8,9,22,26	30-21
40.	ಜಿ. ಮಾಧವ ಮತ್ತು ಕೇಶವ	ಮಲ್ಲಿಗೇನಹಳ್ಳಿ	29	04-02
41.	ಅಧ್ಯಕ್ಷರು, ಪೋಲಿಸ್ ಮತ್ತು ಇತರ ಸರ್ಕಾರಿ ನೌಕರರ ಗೃ ನಿ. ಸಂಘ (ನಿ)	ಗಾಡಿಕೊಪ್ಪ	4	08-00
42.	ಅಧ್ಯಕ್ಷರು, ಪೋಸ್ಟಲ್ ಮತ್ತು ಆರ್‌ಎಂಎಸ್ ನೌಕರರ ಇಹೆಚ್‌ಬಿಸಿಎಸ್ ಲಿ	ಗಾಡಿಕೊಪ್ಪ	63:2	03-00
43.	ನಿಂಗಮ್ಮ	ಮಲ್ಲಿಗೇನಹಳ್ಳಿ	19	06-32
44.	ಜಿ. ಕೆ. ಚಂದ್ರಶೇಖರಪ್ಪ	ಗಾಡಿಕೊಪ್ಪ	32.2	2-09

1	2	3	4	5
45.	ಕಾರ್ಯದರ್ಶಿ, ಕನಕ ಗೃಹನಿರ್ಮಾಣ ಸಹಕಾರ ಸಂಘ (ನಿ)	ಅಲ್‌ಕೊಳ	31	5-22
46.	ನರಸಿಂಹ ಕಿಣಿ	ಮಿಳ್ಳಘಟ್ಟ	101:1	3-00
47.	ಎ. ಟಿ. ಕಾಶಿನಾಥ ಶೆಟ್ಟಿ	ಕಲ್ಲಹಳ್ಳಿ	22	0-27
48.	ಎಂ. ಸತೀಶ್ ಬಾಬು	ಅಲ್‌ಕೊಳ	25:1	1-00
49.	ಆರ್. ಡಿ. ಸೀತಾರಾಮ	ಅಲ್‌ಕೊಳ	25:1	1-00
50.	ಕರಿಬಸಪ್ಪ ಮತ್ತು ಬಿ. ವೈ. ರಾಘವೇಂದ್ರ	ಕಾಶೀಪುರ	20,21,22,23 28,31,32	5-00
51.	ಪಿ. ಎಸ್. ರವಿ	ಗಾಡಿಕೊಪ್ಪ	16	2-00
52.	ಬಸಪ್ಪ	ಗಾಡಿಕೊಪ್ಪ	43:2	1-26
53.	ಮಹ್ಮದ್ ಜಫರುಲ್ಲಾ	ಮುಳ್ಳಕೆರೆ	45:1	1-25
54.	ಬಿ. ಜಿ. ಮಹೇಂದ್ರ	ಅನುಪಿನಹಳ್ಳಿ	71,72,73:2, 73:3,75:3	21-19
55.	ರಾಮಕ್ಕ	ಮುಳ್ಳಕೆರೆ	96,97	1-18
56.	ಮಣಿಮೇಕಲೈ	ಊರಗಡೂರು	130:2	3-04
57.	ಸುಧಾಕರ ಗುಪ್ತ ಮತ್ತು ಅಶ್ವಥನಾರಾಯಣ್ ಮತ್ತು ಇತರರು	ನವಿಲೆ	10,14,15, 17,18	32-06
58.	ಹೆಚ್. ಎಸ್. ರುದ್ರಸ್ವಾಮಿ	ನವಿಲೆ	153:1	04-29
59.	ನೀಲಮೇಘಂ ಮತ್ತು ಎಸ್. ಧನಕೋಟಿ	ಗೌಡೆಕೊಪ್ಪ	10,11,13	11-24
60.	ಪೂರ್ವಾಚಾರ್	ನವಿಲೆ	153	01-29
61.	ಹೆಚ್. ಟಿ. ಗಿರಿಜ	ಸೋಮನಕೊಪ್ಪ	118:1	01-01 $^{1}/_{4}$
62.	ಆರ್. ಆರ್. ರವೀಂದ್ರ	ಮುಳ್ಳಕೆರೆ	75	0-1-19

1	2	3	4	5
63.	ಷೇಕ್ ಖಾದರ್‌ವಲ್ಲಿ	ಗೋಪಾಳ	31:1 1/4	01-2 1/2
64.	ಜಿ. ಕೇಶವಮೂರ್ತಿ	ಸೋಮನಕೊಪ್ಪ	119:ಪಿ	01-20
65.	ನರಸಿಂಹ ಜಿ. ಕಾಳಜಿ	ಬೊಮ್ಮನಕಟ್ಟೆ	148	01-18
66.	ಅಧ್ಯಕ್ಷರು, ಆರೋಗ್ಯ ಇಲಾಖೆ ನೌಕರರ ವಸತಿ ಸಹಕಾರ ಸಂಘ, ಶಿವಮೊಗ್ಗ	ಮಲ್ಲಿಗೇನಹಳ್ಳಿ	73,7	03-38
67.	ಜಿ. ಸಿ. ನಾಗಾರ್ಜುನ್	ಸೋಮನಕೊಪ್ಪ	1:1, :2	05-27
68.	ಜಿ. ನಾರಾಯಣರಾವ್	ಅಲ್‌ಕೊಳ	25:12	01-34
69.	ವೈ. ಪರಶುರಾಮ	ಕಲ್ಲಹಳ್ಳಿ	117:ಪಿ	01-10 1/2
70.	ಸಿ. ರಾಮಚಂದ್ರ	ಕಸಬ	39	07-13
71.	ಎಂ. ಶಂಕರರಾವ್	ಕಲ್ಲಹಳ್ಳಿ	58, 59:3, 60, 61, 62, 63	25-32
72.	ಬಿ. ಎನ್. ಮಲ್ಲಿಕಾರ್ಜುನಪ್ಪ	ಊರಗಡೂರು	128, 129	06-05 1/2
73.	ಕೆ. ಲಕ್ಷ್ಮಣ ಮತ್ತು ಎಲ್. ಮಹೇಶ್	ಪುರಲೆ	19:2	03-22
74.	ವೀಣ ಎಂ ರಾವ್ ಮತ್ತು ಜೆ. ಮುರಳೀಧರ್	ಗಾಡಿಕೊಪ್ಪ	43:2	03-00
75.	ಅಧ್ಯಕ್ಷರು ಟೆಲಿಕಾಂ ಇಹೆಚ್‌ಬಿಎಸ್‌ಸಿ ಲಿಮಿಟೆಡ್	ಅನುಪಿನಕಟ್ಟೆ	77,78,79,83	25-17
76.	ಅಧ್ಯಕ್ಷರು ಪೋಲೀಸ್ ಮತ್ತು ಇತರೆ ಐಹೆಚ್‌ಬಿಸಿಎಸ್ ಲಿ. ಶಿವಮೊಗ್ಗ	ಗಾಡಿಕೊಪ್ಪ	40:1	02-10
77.	ಜೆ. ರಾಜಶೇಖರಪ್ಪ	ಗೋಪಾಳ	2:3	02-02
78.	ಅಧ್ಯಕ್ಷರು, ಖಾಸಗಿ ಶಾಲಾ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ, ಶಿವಮೊಗ್ಗ	ಊರಗಡೂರು	16:ಪಿ	07-36

1	2	3	4	5
79.	ಎಸ್.ಜಿ. ರಮೇಶ್‌ಬಾಬು	ಮುಳ್ಳಕೆರೆ	44:1	02-00
80.	ಎ.ಎಸ್. ಚಂದ್ರಕಾಂತ್	ಮಲ್ಲಿಗೇನಹಳ್ಳಿ	27	02-00
81.	ನಾಚೂಬಾಯಿ ಮತ್ತು ಸುಭದ್ರಮ್ಮ	ಗಾಡಿಕೊಪ್ಪ	7	03-17
82.	ಹೆಚ್. ಎಸ್. ರುದ್ರಸ್ವಾಮಿ	ಅಲ್‌ಕೊಳ	103	05-00
83.	ಕೆ.ಎಸ್. ಗಂಗಾಧರಪ್ಪ ಮತ್ತು ಇತರರು	ಕಸಬಾ	38:ಪಿ	06-00

ಭದ್ರಾವತಿ

1	2	3	4	5
1.	ಹೆಚ್.ಡಿ. ಪುಟ್ಟಸ್ವಾಮಿ ಮತ್ತು ಅಂಥೋಣಿ ಡಿಸೋಜ	ಬುಳ್ಳಾಪುರ	25	01-09 $^{1}/_{2}$
2.	ಹೆಚ್.ಬಿ. ವೀರಣ್ಣಗೌಡ	ಬುಳ್ಳಾಪುರ	25	01-08
3.	ಅಧ್ಯಕ್ಷರು, ಮಾಡಲ್ ಹೌಸಿಂಗ್ ಕೋ. ಆಪರೇಟಿವ್ ಸೊಸೈಟಿ ಲಿ.	ಭದ್ರಾವತಿ ಕಸಬಾ ಬೊಮ್ಮನಕಟ್ಟೆ	30 34,35	 08-19
4.	ಎಂ.ವಿ. ಮಹ್ಮದ್‌ಶಾಲಿ	ಭದ್ರಾವತಿ ಕಸಬಾ	191:2ಬಿ	00-35
5.	ಸಿ. ಹಾಲಪ್ಪ	ಭದ್ರಾವತಿ ಕಸಬಾ	29	02-26
6.	ಹನುಮಂತಪ್ಪ ಎಸ್. ಆರ್	ಭದ್ರಾವತಿ	26:1	01-10
7.	ಹೆಚ್. ರಾಮಪ್ಪ ಮತ್ತು ಪೂರ್ವಾಚಾರ್	ಭದ್ರಾವತಿ	22:1ಎ, 22:2ಎ	03-07
8.	ಎಂ. ಕಣ್ಣನ್	ಭದ್ರಾವತಿ	188:3ಬಿ	03-00
9.	ಅಧ್ಯಕ್ಷರು ಎಪಿಎಂ ಇಹೆಚ್‌ಬಿಸಿಎಸ್	ಆನೆಕೊಪ್ಪ	14	25-00
10.	ಸಿ. ಹಾಲಪ್ಪ	ಭದ್ರಾವತಿ	27,28	02-04
11.	ದೀಪಕ್ ಮೈ.ಗ್ರಾ.ಚಂದ್ರಾದೇವಿ	ಕಣಕಟ್ಟೆ	66	05-13
94 ವಿನ್ಯಾಸಗಳು			ಒಟ್ಟು 529.22 $^{1}/_{4}$ ಗುಂಟೆಗಳು	

ಶ್ರೀ ಹೆಚ್. ಎಂ. ಚಂದ್ರಶೇಖರಪ್ಪ : ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ - ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರವನ್ನು ಯಾವ ಉದ್ದೇಶದಿಂದ ಸರ್ಕಾರ ರಚನೆ ಮಾಡಿದೆ ಎಂದು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿದ (ಅ) ಪ್ರಶ್ನೆಗೆ ನಾವು ಉತ್ತರಿಸಿದ್ದೇವೆ. ಶಿವಮೊಗ್ಗ - ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಎಷ್ಟು ಎಕರೆಯಲ್ಲಿ ಲೇಔಟ್ ಮಾಡುತ್ತೀರಿ ಎನ್ನುವುದಕ್ಕೆ 529 ಎಕರೆಯಲ್ಲಿ ಮಾಡಿರುತ್ತೇವೆ ಎಂದು ಹೇಳಿದ್ದೇವೆ.

ಶ್ರೀ ಹೆಚ್. ಎಂ. ಚಂದ್ರಶೇಖರಪ್ಪ : ಅವರು ಕೊಟ್ಟಿರುವ ಉತ್ತರದಲ್ಲಿರುವಂತೆ ಸುಮಾರು 83 ಜನಗಳಿಗೆ ಬಡಾವಣೆ ಮಾಡಿಕೊಟ್ಟಿರುವುದು ಸಂತೋಷದ ಸಂಗತಿ. ಇದರ ಬಗ್ಗೆ ನಾನೇನು ಮಾತನಾಡುವುದಿಲ್ಲ. ಆದರೆ, ಇವುಗಳನ್ನು ಹೆಚ್ಚಾಗಿ ಸೊಸೈಟಿಗಳಿಗೆ ಕೊಟ್ಟಿದ್ದರೆ ಚೆನ್ನಾಗಿತ್ತು. ಈಗ ಏನಾಗಿದೆ ಎಂದರೆ, ಅವರು ಕೊಟ್ಟಿರುವ ಮಾಹಿತಿ ಪ್ರಕಾರ ಹಾಗೂ ಜನಗಳಿಂದ ಬಂದ ಮಾಹಿತಿ ಪ್ರಕಾರ ಇನ್ನೂ ಅನೇಕ ಬಡಾವಣೆಗಳು ಇದರಲ್ಲಿ ಬಿಟ್ಟು ಹೋಗಿವೆ. ಇದರಲ್ಲಿ ಬಹಳ ಜನ ಬಿಟ್ಟು ಹೋಗಿರುವುದರಿಂದ ಸರ್ಕಾರದವರು ಇದರ ವಿವರಗಳನ್ನು ತರಿಸಿ ಕೊಡಬೇಕೆಂದು ಕೇಳುತ್ತೇನೆ. ಯಾವ ಕಾರಣಕ್ಕಾಗಿ ಇದನ್ನು ಸರ್ಕಾರ ಬಿಟ್ಟಿದೆ ಎಂದು ನನಗೆ ಗೊತ್ತಿಲ್ಲ. ಇದರ ಜೊತೆಗೆ ಸರ್ಕಾರ ಕೊಟ್ಟಿರುವ ಉದ್ದೇಶ ಏನೆಂದರೆ ಪ್ರತಿಯೊಬ್ಬರಿಗೂ ಇಲ್ಲಿ ನಿವೇಶನ ಸಿಗಬೇಕು ಎಂದು ಕೊಟ್ಟಿರುವಾಗ ಇದರಲ್ಲಿ ಅನೇಕ ಅನ್ಯಾಯಗಳು ನಡೆದಿವೆ. ಇದನ್ನು ಖಾಸಗಿಯವರಿಗೆ ಕೊಟ್ಟಿದ್ದರಿಂದ ಅವರು ಹಣ ಮಾಡಿಕೊಂಡು ಹೋಗುತ್ತಿದ್ದಾರೆಯೇ ವಿನಃ ಬೇರೆ ಏನೂ ಆಗಿಲ್ಲ. ಇದರಿಂದಾಗಿ ಮಧ್ಯಮ ವರ್ಗದ ಜನರಿಗೆ ಏನೂ ಉಪಯೋಗವಾಗಿಲ್ಲ. ಲೇಔಟ್‌ನಲ್ಲಿ ಯು. ಜಿ. ಡಿ. ಕೊಡುವುದಿಲ್ಲ, ವಾಟರ್ ಸಪ್ಲೈ ಮತ್ತು ಕರೆಂಟ್ ಕೂಡ ಇರುವುದಿಲ್ಲ. ಆದ್ದರಿಂದ, ಇದರ ಬಗ್ಗೆ ದೀರ್ಘವಾಗಿ ಚರ್ಚೆಯಾಗಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ : ಮಾನ್ಯ ಸದಸ್ಯರ ಅಳಲಿನಂತೆ, ಈಗಾಗಲೇ ಅಲ್ಲಿ ಡ್ರೈನೇಜ್, ಯು. ಜಿ. ಡಿ, ಇವುಗಳ ಸಂಪರ್ಕವನ್ನು ಲೇಔಟ್ ಕೊಡತಕ್ಕಂಥ ಕಾಲದಲ್ಲಿ ಕೊಡುತ್ತೇವೆ. ಅವರು ಹೇಳಿದ ಪ್ರಕಾರ ಅಲ್ಲಿ ಏನಾದರೂ ಅನ್ಯಾಯ ಆಗಿದ್ದರೆ, ತೊಂದರೆಯಾಗಿದ್ದರೆ, ಆ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಈಗಾಗಲೇ ನಾವು ಅಲ್ಲಿ ಎಷ್ಟು ಲೇಔಟ್ ಇದ್ದವೋ ಅಷ್ಟನ್ನು ಮಾಡಿದ್ದೇವೆ, ಇನ್ನು ಉಳಿದಂಥವುಗಳ ಬಗ್ಗೆ ವರದಿ ತರಿಸಿ, ಅಲ್ಲಿ ಏಕೆ ಪೆಂಡಿಂಗ್ ಇದೆ ಎಂದು ತಿಳಿದುಕೊಂಡು ಅದನ್ನು ಪೂರ್ಣಗೊಳಿಸುತ್ತೇನೆ.

ಶ್ರೀ ಹೆಚ್. ಎಂ. ಚಂದ್ರಶೇಖರಪ್ಪ : ಮಾನ್ಯ ಅಧ್ಯಕ್ಷರೆ, ಈ ಪಟ್ಟಿಯನ್ನು ಓದಿದರೆ, ಇನ್ನು ಅನೇಕ ಜನ ಇರುವುದರಿಂದ ಈ ಬಗ್ಗೆ ಹೆಚ್ಚಿನ ಚರ್ಚೆ ಮಾಡಲು ತಾವು ಕಾಲಾವಕಾಶ ಕೊಡಬೇಕು. ಏಕೆಂದರೆ, ಈ ಪಟ್ಟಿಯಲ್ಲಿ ಬಹಳ ಜನರನ್ನು ಬಿಟ್ಟು ಹೋಗಿದೆ.

ಅಧ್ಯಕ್ಷರು : ನೀವು ನನಗೆ ನೋಟಿಸ್ ಕಳುಹಿಸಿಕೊಡಿ, ನಂತರ ನಾನು ಮೆರಿಟ್ ಆಧಾರದ ಮೇಲೆ ನಿರ್ಧರಿಸುತ್ತೇನೆ.

ಶ್ರೀ ಹೆಚ್. ಎಂ. ಚಂದ್ರಶೇಖರಪ್ಪ : ಮಾನ್ಯ ಅಧ್ಯಕ್ಷರೆ, ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಅವರು ವಾರ್ಷಿಕ ಆದಾಯವನ್ನು ಕೊಟ್ಟಿದ್ದಾರೆ. ಇವತ್ತು ನಗರ ಸಭೆಯನ್ನು ನಡೆಸುವುದು ಬಹಳ ಕಷ್ಟವಾಗಿದೆ. ಆದ್ದರಿಂದ, ಮಂತ್ರಿಗಳಲ್ಲಿ ಕಳಕಳಿಯಿಂದ ನಾನು ಏನು ಕೇಳುತ್ತೇನೆಂದರೆ, ನಮ್ಮಲ್ಲಿ ಈಗ ಸಿಟಿ ದೊಡ್ಡದಾಗಿರುವುದರಿಂದ ಟ್ರಾಫಿಕ್ ಕೂಡ ಜಾಸ್ತಿಯಾಗಿದೆ. ಜೊತೆಗೆ ಆರ್. ಟಿ. ಓ. ನವರು ರೋಡ್ ಟ್ಯಾಕ್ಸ್ ಹೆಚ್ಚಿನ ಪ್ರಮಾಣದಲ್ಲಿ ಕೊಡುತ್ತಿಲ್ಲ. ಆದ್ದರಿಂದ, ಇದನ್ನು ಹೆಚ್ಚಿಸಬೇಕು, ಇದರ ಜೊತೆಗೆ ಶಿವಮೊಗ್ಗ ನಗರಕ್ಕೆ ಅನೇಕ ಅಭಿವೃದ್ಧಿ ಕಾರ್ಯಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಆದ್ದರಿಂದ, ಸರ್ಕಾರದ ವತಿಯಿಂದ ಮನರಂಜನಾ ತೆರಿಗೆಯನ್ನು ಜಾಸ್ತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಎಲ್ಲಾ ನಗರ ಸಭೆಯಲ್ಲಿ ಬಂದಿರತಕ್ಕಂಥ ವಿಚಾರ ಏನೆಂದರೆ, ಈ ಅಸೆಸ್‌ಮೆಂಟ್ ಮಾಡುವ ವಿಚಾರದಲ್ಲಿ ಬಹಳ ಮೋಸ ಆಗಿದೆ. ಸರ್ಕಾರದ ವತಿಯಿಂದ ನೇಮಿಸಿರುವ ಅಧಿಕಾರಿಗಳು ಎಲ್ಲೋ ಕುಳಿತು ಈ ಅಸೆಸ್‌ಮೆಂಟ್ ಮಾಡುವುದು ಯಾರಿಗೂ ಗೊತ್ತಾಗುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ನಮ್ಮಲ್ಲಿ ಕೂಲಿ ಮಾಡುವ ಹೆಂಗಸಿಗೆ ತಿಂಗಳಿಗೆ ಮೂನ್ನೂರು ರೂಪಾಯಿ ಕೂಡ ಸಿಕ್ಕುವುದು ಕಷ್ಟ. ಇಂಥವರ ಮನೆಗೆ ಮೂರು ಸಾವಿರ ರೂಪಾಯಿ ಅಸೆಸ್‌ಮೆಂಟ್ ಹಾಕಿದ್ದಾರೆ. ಈಗಾಗಲೇ ಮೂರು ಜನರನ್ನು ಸಸ್‌ಪೆಂಡ್ ಮಾಡಲಿಕ್ಕೆ ನಗರ ಸಭೆಯ ವತಿಯಿಂದ ಸರ್ಕಾರಕ್ಕೆ ಕಳುಹಿಸಿ ಕೊಟ್ಟರೂ ಇದುವರೆವಿಗೂ ಯಾವುದೇ ರೀತಿಯ ಉತ್ತರ ಕೂಡ ಬಂದಿಲ್ಲ. ಆದ್ದರಿಂದ, ಇಂಥ ನಗರ ಸಭೆಯ ಹೆಚ್ಚಿನ ಆದಾಯ ಬರುವುದಕ್ಕೆ ಮಾನ್ಯ ಸಚಿವರು ಆದೇಶ ಕೊಡಬೇಕೆಂದು ಕೇಳಿಕೊಳ್ಳುತ್ತಾ, ಈಗಾಗಲೇ ಅನೇಕ ಕಟ್ಟಡಗಳು ಬಹಳ ಹಳೆಯದಾಗಿರುವುದರಿಂದ ಹೊಸ ಕಟ್ಟಡಗಳನ್ನು ಕಟ್ಟಲಿಕ್ಕೆ ಬಹಳ ಕಡಿಮೆ ದರದಲ್ಲಿ ಕೊಟ್ಟಿದ್ದಾರೆ. ಇದನ್ನು ಕೂಡ ಹೆಚ್ಚಿಗೆ ದರಗಳಲ್ಲಿ ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಕಳಕಳಿಯನ್ನು ತಿಳಿದುಕೊಂಡಿದ್ದೇವೆ, ಅವರೇನು ಕಾಳಜಿ ಮಾಡಿದ್ದಾರೆ ಅದರ ಬಗ್ಗೆ ಕಾಳಜಿ ವಹಿಸಿ ಅವರ ಕೆಲಸ ಮಾಡಿಸಿ ಕೊಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಬಿ. ಶಿವಪ್ಪ : ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ (ಅ) ಕ್ಕೆ ಬಹಳ ಸುದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಕಲ್ಪಿಸಿ ಕೊಡಬೇಕೆಂದು ಮಾನ್ಯ ಚಂದ್ರಶೇಖರಪ್ಪನವರು ಕೇಳಿದರು. ಕಾರಣ, ಅತ್ಯಂತ ಪ್ರಭಾವಶಾಲಿಗಳು ಮತ್ತು ರಾಜಕಾರಣಿಗಳು, ಇದರಲ್ಲಿ ಇದ್ದಾರೆ. ಅವರು ಕೊಟ್ಟಿರುವ ಪಟ್ಟಿಯಲ್ಲಿ ಕೆಲವು ಹೆಸರುಗಳು ಇದರಲ್ಲಿ ಕಾಣುತ್ತಿಲ್ಲವಾದ್ದರಿಂದ, ಇದರ ಬಗ್ಗೆ ದೀರ್ಘವಾದ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟರೆ ಇದರಲ್ಲಿ ಇರುವುದೆಲ್ಲಾ ಹೊರಗೆ ಬರುತ್ತದೆಂದು ನನ್ನ ಭಾವನೆ. ಆದ್ದರಿಂದ ಇದಕ್ಕೆ ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು : ನನಗೆ ತಾವು ನೋಟೀಸ್ ಕೊಡಿ, ಮೆರಿಟ್ ನೋಡಿ ನಿರ್ಧರಿಸುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ನನ್ನದೊಂದು ಮನವಿ ಏನೆಂದರೆ, ಪ್ರತಿಯೊಂದು ಪ್ರಶ್ನೆಗೂ ಅರ್ಧ ಗಂಟೆ ಚರ್ಚೆ ಮಾಡುವುದಕ್ಕೆ ನನ್ನದೇನೂ ಅಭ್ಯಂತರವಿಲ್ಲ.

ಈ ಅಧಿವೇಶನದಲ್ಲಿ ಇಲಾಖಾ ಬೇಡಿಕೆಗಳ ಮೇಲೆ ಚರ್ಚೆ ಮಾಡಬೇಕಾಗಿದೆ. ಆದ್ದರಿಂದ, ಆ ಸಂದರ್ಭದಲ್ಲಿ ಈ ವಿಷಯವೆಲ್ಲವನ್ನು ಸುದೀರ್ಘವಾಗಿ ಚರ್ಚೆ ಮಾಡಬಹುದು. ನೀವು ಖಾಸಗಿಯಾಗಿ ಚರ್ಚೆ ಮಾಡುವುದನ್ನು ಇಲಾಖೆಯ ಬೇಡಿಕೆಗಳ ಮೇಲೆ ಚರ್ಚೆ ಮಾಡುವಾಗ ಉಪಯೋಗ ಮಾಡಬಹುದು. ಆದ್ದರಿಂದ ಬೇಡಿಕೆಗಳ ಮೇಲೆ ಚರ್ಚೆ ಬಂದಾಗ ಈ ವಿಷಯಗಳನ್ನು ಚರ್ಚೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಚರ್ಚೆಗೆ ಅವಕಾಶ ಮಾಡಿಕೊಟ್ಟಿಲ್ಲ. ಮೊದಲು ನೋಟೀಸ್ ಕಳುಹಿಸಿ, ನಾನು ಮೆರಿಟ್ ಮೇಲೆ ತೀರ್ಮಾನ ಮಾಡುತ್ತೇನೆಂದು ಹೇಳಿದೆನಷ್ಟೆ.

ಆನೇಕಲ್‌ನಲ್ಲಿ ಮೊರಾರ್ಜಿ ದೇಸಾಯಿ ಶಾಲೆ

259 (2662) : **ಶ್ರೀ ನಾರಾಯಣಸ್ವಾಮಿ. ಎ. (ಆನೇಕಲ್) :** ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಆನೇಕಲ್ ಕ್ಷೇತ್ರದಲ್ಲಿ ಮೊರಾರ್ಜಿ ದೇಸಾಯಿ ಶಾಲೆ ಪ್ರಾರಂಭಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಈ ಶಾಲೆಯಲ್ಲಿನ ಅವ್ಯವಸ್ಥೆ, ಅವ್ಯವಹಾರಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಈ ಶಾಲೆಗೆ ಶಾಶ್ವತ ಕಟ್ಟಡ ನಿರ್ಮಿಸಲು ಪ್ರಸಕ್ತವಾಗಿರುವ ಭೂಮಂಜೂರಾತಿಗೆ ಸರ್ಕಾರದ ವಿಳಂಬವೇಕೆ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

(ಅ) ಬಂದಿರುತ್ತದೆ

(ಆ) ಬಂದಿರುವುದಿಲ್ಲ.

(ಇ) ಈ ವಸತಿ ಶಾಲೆಯ ಕಟ್ಟಡ ನಿರ್ಮಾಣಕ್ಕಾಗಿ ಆನೇಕಲ್ ತಾಲ್ಲೂಕು ಸರ್ಜಾಪುರ ಹೋಬಳಿಯ ಯಮರೆ ಗ್ರಾಮದ ಸರ್ವೆ ನಂ. 135 ರಲ್ಲಿ 21.21 ಎಕರೆ ಜಮೀನನ್ನು ಮಂಜೂರು ಮಾಡುವಂತೆ ಕುಂದಾಯ ಇಲಾಖೆಯನ್ನು ಕೋರಲಾಗಿದ್ದು, ಮಂಜೂರಾತಿಯನ್ನು ನಿರೀಕ್ಷಿಸಲಾಗಿದೆ.

ಶ್ರೀ ಎ. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೆ, ಅವರು ಉತ್ತರವನ್ನು ಒದಗಿಸಿದ್ದಾರೆ. ಆ ಉತ್ತರದಲ್ಲಿ ನನ್ನ ಮೊದಲನೇ ಪ್ರಶ್ನೆಗೆ 'ಬಂದಿರುತ್ತದೆ' ಎಂದು ಹಾಗೂ ಎರಡನೇ ಪ್ರಶ್ನೆಗೆ 'ಬಂದಿರುವುದಿಲ್ಲ' ವೆಂದು ಉತ್ತರ ಕೊಟ್ಟಿದ್ದಾರೆ. ನನಗೊಂದು ಜಿಜ್ಞಾಸೆ ಉಂಟಾಗಿದೆ. ಏನೆಂದರೆ, ಶಾಸಕರು ಪ್ರಶ್ನೆಯನ್ನು ಕಳುಹಿಸಿಕೊಟ್ಟಾಗ ಸರ್ಕಾರಿ ಅಧಿಕಾರಿಗಳ ಉತ್ತರ ಹೇಗಿರುತ್ತದೆಂದರೆ, ಹೌದಪ್ಪ ಎಂದರೆ ಹೌದಪ್ಪ, ಇಲ್ಲಪ್ಪ ಎಂದರೆ ಇಲ್ಲಪ್ಪ ಎಂದು ಅವರು ಉತ್ತರವನ್ನು ಕೊಡುವುದಾದರೆ, ಶಾಸಕರು ತಮ್ಮ ಕಳಕಳಿಯನ್ನು ಯಾವ ರೀತಿ ವ್ಯಕ್ತಪಡಿಸಬೇಕೆಂದು ನನಗೆ ಅರ್ಥವಾಗುತ್ತಿಲ್ಲ. ಹಿರಿಯ ಸದಸ್ಯರಾದಂಥ ದಿವಂಗತ ವೈ. ರಾಮಕೃಷ್ಣರವರ ಕಾಲದಲ್ಲಿ ಈ ಶಾಲೆ ಪ್ರಾರಂಭವಾಯಿತು. ಈ ಶಾಲೆಗೆ ಜಿಲ್ಲಾ ಪಂಚಾಯತಿಯ ಸ್ಥಾಯಿ ಸಮಿತಿಯವರು